

### ಪರಿಹಾರ ಸೂಚನೆ

ಜುಲೈ 12ರ 'ಸುಧಾ' ಸಂಚಿಕೆಯ ಮುಖಪುಟ ಲೇಖನ ಡಾ.ಕೆ.ಎಸ್. ಪವಿತ್ರ ಅವರ 'ನಿಮ್ಮ ಮಕ್ಕಳು ಮರೆಗುಳಿಗಳೆ?'– ಮಕ್ಕಳ ಮರೆಗುಳಿತನಕ್ಕೆ ಕಾರಣ ಹಾಗೂ ಪರಿಹಾರಗಳನ್ನು ಸೂಚಿಸಿದೆ.

–ಎಸ್.ನಿತ್ಯ, ಮೂಡಬಿದರೆ/ ಅಮೃತೇಶ ತಂಡರ, ಅಣ್ಣಿಗೇರಿ

### ಇಲ್ಲೇ ನೋಡೋಣ!

'ಲಂಡನ್ ಐ' ಲೇಖನ (ವಸುಂಧರಾ ಎಸ್. ಕುಮಾರ್) ನಿಜಕ್ಕೂ ರೋಮಾಂಚನ ತಂದಿತು. ದೂರದ ಲಂಡನ್ ನಗರಕ್ಕೆ ಹೋಗಿ ಅಲ್ಲಿನ ಬೃಹತ್ ತೊಟ್ಟಿಲಿನಲ್ಲಿ ಕುಳಿತು ಆನಂದಿಸುವ ಭಾಗ್ಯ ಬಹಳಷ್ಟು ಜನರಿಗೆ ದೊರಕಲಿಕ್ಕಿಲ್ಲ. ಹತ್ತಿರದ ಮೈಸೂರಿನಲ್ಲಿ ಅಂತಹ ತೊಟ್ಟಿಲು ಬಂದಾಗ 'ಕ್ಯೂ' ನಿಂತು ಅದರ ಆನಂದವನ್ನು ಅನುಭವಿಸಲು ಕಾತುರನಾಗಿದ್ದೇನೆ!

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ/ ಎಚ್. ಆನಂದ ಕುಮಾರ್, ಚಿತ್ರದುರ್ಗ

### ಆಗಲೇ ನೋಡಬಹುದಿತ್ತು!

2001ನೇ ಸೆಪ್ಟೆಂಬರ್ ತಿಂಗಳಿನಲ್ಲಿ ಒಂದು ದಿನ 'ಲಂಡನ್ ಐ'ನಲ್ಲಿ ಒಂದು ಸುತ್ತು ಸುತ್ತಲು ಸರತಿ ಸಾಲಿನಲ್ಲಿ ಸುಮಾರು 30 ನಿಮಿಷ ನಿಂತು –ದುಬಾರಿ ಶುಲ್ಕ ಕೊಡಲಾರದೆ– ಹೊರಬಂದೆ. ಆದರೆ 'ಲಂಡನ್ ಐ' ಲೇಖನ ಓದಿ ಹನ್ನೊಂದು ವರುಷಗಳ ಹಿಂದೆ ನಾನು ಮಾಡಿದ ತಪ್ಪಿನ ಅರಿವಾಯಿತು. ಕಾಲ ಮಿಂಚಿದೆ!

–ಹೆಚ್. ಗುಂಡೂರಾವ್, ಬೆಂಗಳೂರು

### ಚಲನಶೀಲತೆಯ ಬಿಂಬ

ವೈನತೇಯ ಅವರ 'ವಿಕಾಸಮುಖೀ ಮಾನವ' ವಿಚಾರ ಲಹರಿಯು ಬದುಕಿನ ವಿಕಾಸ, ಚಲನಶೀಲತೆಯನ್ನು ಬಿಂಬಿಸಿದೆ.

–ಕೊಹಿಮ, ಬಸರಕೋಡು

### ಅರ್ಥಪೂರ್ಣ ಲೇಖನ

ನಡಹಳ್ಳಿ ವಸಂತರ 'ಕೂಗಾಡಿದರೆ ಸಮಸ್ಯೆ ಪರಿಹಾರ ಆಗುತ್ತದೆಯೇ?' ಅರ್ಥಪೂರ್ಣ ಲೇಖನ.

–ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ/ ಪುಷ್ಪಾ ಶ್ರೀರಾಮರಾಜು, ಬೆಂಗಳೂರು/ ಸು. ವಿಜಯಲಕ್ಷ್ಮೀ, ಶಿವಮೊಗ್ಗ

### ಕಥೆ ಚಲೋ ಇತ್ರಿ

'ಖೋಟಾ ನೋಟು' ಬಿ.ಎಂ. ಚಂದ್ರಶೇಖರಯ್ಯನವರ ಕಥೆ ಚಲೋ ಇತ್ರಿ. ಖೋಟಾ ನೋಟನ್ನು ಬದಲಾಯಿಸಿ ಯಶಸ್ವಿಯಾದರೂ ಸಾಬರ ಅಮಾಯಕ ಹುಡುಗನ ಮುಖ ಅವನ ಕಣ್ಣ ಮುಂದೆ ತೇಲಿ ಬಂದಾಗ ಕೃಷ್ಣ ನಿದ್ದೆಗೆ ಪರವಶನಾಗಿದ್ದನು. ಮನಸ್ಸಿಗೆ ಬಾಳ ಹಿಡಿಸ್ತು.

–ಬಿ.ಎಸ್. ಮುಳ್ಳೂರ, ಹಲಗತ್ತಿ

### ಪುನರಾವರ್ತನೆ ಬೇಡ

'ಪದಬಂಧ' ಅಂಕಣದಲ್ಲಿ (ಜುಲೈ 12) ಪ್ರಕಟವಾದ 'ಔತಣ ನೀಡಬೇಕೆಂಬ ಆಜ್ಞೆಯೇ ಬಂದಿದೆ' ಎಂಬ ರಚನೆ ಈಗಾಗಲೇ (ಜೂನ್ 21ರಲ್ಲಿ) ಪ್ರಕಟವಾಗಿದೆ. ಅದರಲ್ಲಿ 'ಔತಣ ಆಗಲೇಬೇಕೆಂಬ ಆಜ್ಞೆ ಬಂದಿದೆ' ಎಂದಿತ್ತು. ಇವೆರಡಕ್ಕೂ ಪದಗಳಲ್ಲಿ ಮಾತ್ರ ವ್ಯತ್ಯಾಸ. ಆದರೆ ಉತ್ತರ ಮಾತ್ರ ಒಂದೇ– 'ಆಣತಿ'. ಇಂಥ ಪುನರಾವರ್ತನೆ ತಪ್ಪಿಸಿ.

–ಡಿ. ದೊಡ್ಡಲಿಂಗೇಗೌಡ, ಮಳವಳ್ಳಿ

### ಅರ್ಥಪೂರ್ಣ ಚಿತ್ರ ಇರಲಿ

ಚಿತ್ರಕಲೆ, ಛಾಯಾಚಿತ್ರಕ್ಕೆ 'ಸುಧಾ' ಎಂದಿಗೂ ಆದ್ಯತೆ ನೀಡಿದೆ. ಪುಟ ವಿನ್ಯಾಸದಲ್ಲೂ 'ಸುಧಾ'ಕ್ಕೆ 'ಸುಧಾ'ವೇ ಮಾದರಿ. ಆದರೂ ಒಮ್ಮೊಮ್ಮೆ ಅಕ್ಷರಗಳ ಭಾರದಿಂದ ನರಳುತ್ತದೆ! ಹಾಗಾಗದಿರಲಿ. ತನ್ನ ಎಂದಿನ ಸಂಪ್ರದಾಯದಂತೆ ಅರ್ಥಪೂರ್ಣ ಚಿತ್ರಕಲೆ, ಅತ್ಯುತ್ತಮ ಛಾಯಾಚಿತ್ರ ಹಾಗೂ ವಿನ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿರಿ.

–ರೇಣುಕಾ ಪಾಟೀಲ, ದಾವಣಗೆರೆ

### ಮೆದುಳು ಜತೆಗೆ ಹೊಟ್ಟೆಗೂ ಆಹಾರ

ಕಳೆದ ಈ ಗುರುವಾರ 'ಸುಧಾ' ಓದಿನೊಂದಿಗೆ ಉಪ್ಪಿಟ್ಟು ಸೇವನೆ ಆದದ್ದು ವಿಶೇಷ. ಸಿದ್ಧ ಆಹಾರದ– ಸ್ವಚ್ಛ ಪೊಟ್ಟಣವನ್ನು ಸ್ಯಾಂಪಲ್‌ಗಾಗಿ 'ಸುಧಾ' ಜತೆ ವಿತರಿಸಿದ್ದೀರಿ. ತಕ್ಕ ಮಟ್ಟಿಗೆ ತಾಜಾ ಆಗಿದ್ದ ಈ ಉಪಾಹಾರ ರುಚಿಕಟ್ಟಾಗಿತ್ತು. 'ಸುಧಾ' ಮೆದುಳಿಗಷ್ಟೇ ಆಹಾರ ಕೊಡುತ್ತದೆ; ಜತೆಗೆ ಹೊಟ್ಟೆಗೂ ಒಂಚೂರು ಕೊಟ್ಟಿತಲ್ಲ– ಧನ್ಯವಾದಗಳು.

ಆದರೆ ಒಂದು ಸೂಚನೆ: ಕರ್ನಾಟಕದಲ್ಲಿ ಮಾರಾಟಕ್ಕೆ ವಿತರಣೆ ಆಗುವ ಯಾವುದೇ ಪದಾರ್ಥದ ಪೊಟ್ಟಣದ ಮೇಲೆ, ಕನ್ನಡದಲ್ಲಿ ಉತ್ಪನ್ನದ ಹೆಸರು ಬಳಸುವ ಸೂಚನಾ ವಾಕ್ಯಗಳು ಇರಲಿ.

–ಸರ್ವಜಿತ, ಹುಬ್ಬಳ್ಳಿ




### ವಧು ಪರೀಕ್ಷೆ

ಹುಡುಗ: ಹುಡುಗೀನ ನೋಡೋಕೆ ಹೋದ. ಮನೇಲಿ ಇಬ್ಬರನ್ನೂ ಪರಸ್ಪರ ಪರಿಚಯ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟರು.

ಹುಡುಗಿ: (ಹೆದರುತ್ತಾ) ಅಣ್ಣಾ, ನಿಮ್ಗೆ ಎಷ್ಟು ಜನ ಅಕ್ಕ ತಂಗಿಯರಿದ್ದಾರೆ?

ಹುಡುಗ: ಇಲ್ಲಿ ತನಕ ಮೂರು ಜನ ಇದ್ರು. ಈಗ ನೀನೂ ಸೇರಿ ನಾಲ್ಕು ಜನ ಆದ್ರು.

★★★

### ನಕ್ಕುಬಿಡಿ



ಸಾರು!

ವನಜಮ್ಮ: ಸಾಂಬಾರಿಗೆ ಟೊಮ್ಯಾಟೋ ತರಲು ಹೋದ ನನ್ನ ಗಂಡ ಮೂರು ದಿನಾ ಆದ್ರೂ ಬಂದಿಲ್ಲಾ ಏನ್ಮಾಡ್ಲಿ ಸಾರ್...?

ಪೊಲೀಸ್: ಎಷ್ಟು ದಿನಾಂತ ಕಾಯ್ತೀರಾ? ಹುಣಸೇ ಹಣ್ಣನ್ನು ಹಾಕಿ ಸಾರು ಮಾಡಮ್ಮಾ...

ಸಂಗ್ರಹ: ಸುಮಾ ಕಳಸಾಪುರ

ಆತ: ಡಾಕ್ಟ್ರೇ ನಾನು ಹತ್ತನೇ ಮಹಡಿಯಿಂದ ಕೆಳಗೆ ಬಿದ್ದರೂ ಸಾಯಲಿಲ್ಲವೆ?

ಡಾಕ್ಟರ್: ಇಲ್ಲಪ್ಪಾ, ನೀನು ಮೇಲಿಂದ ಬೀಳುವಾಗ ಕೆಳಗಡೆ ಹೋಗುತ್ತಿದ್ದ ನಾಲ್ಕು ಜನರ ಮೇಲೆ ಬಿದ್ದೆ, ಅವರು ಸತ್ತರು, ನೀನು ಬದುಕಿದೆ!

★★★

ಮಹಿಳಾ ರೋಗಿ:ಡಾಕ್ಟ್ರೇ ನನ್ನ ಪ್ರಜ್ಞೆ ತಪ್ಪಿಸುವ ಮುಂಚೆ ಹೊರಗಿರುವ ನಿಮ್ಮ ನರ್ಸನ್ನು ಇಲ್ಲಿಯೇ ಇರಲು ಹೇಳಿ!

ಡಾಕ್ಟರ್: ಏನಮ್ಮಾ, ನನ್ನ ಮೇಲೆ ನಂಬಿಕೆ ಇಲ್ವೇ?

ಮಹಿಳಾ ರೋಗಿ: ಅದಕ್ಕಲ್ಲ ಡಾಕ್ಟ್ರೇ, ಹೊರಗಡೆ ನನ್ನ ಪತಿ ಕುಳಿತಿದ್ದಾರೆ!

★★★

ಡಾಕ್ಟರ್: ಆ ಸಿನಿಮಾ ನಟಿಗೆ ಜ್ಞಾನ ಬಂತಾ?

ನರ್ಸ್: ಬಂತು ಸಾರ್

ಡಾಕ್ಟರ್: ಈಗ ಏನು ಮಾಡುತ್ತಿದ್ದಾಳೆ?

ನರ್ಸ್: ಕನ್ನಡಿ ಮುಂದೆ ನಿಂತ್ಕೊಂಡು ಮೇಕಪ್ ಮಾಡ್ಕೊತಿದ್ದಾಳೆ!

ಸಂಗ್ರಹ: ಶಂಕರೇಗೌಡ ತುಂಬಕೆರೆ